


## ಹಳೆಯ ಆಟ, ಹೊಸ ನೋಟ!



ಹಿಂದಿನ ನಮ್ಮ ಸಿನಿಮಾಗಳಲ್ಲಿ ಅವಳಿ ಸಹೋದರರು ಪರಸ್ಪರ ಅಗಲುವುದು, ಇಬ್ಬರಲ್ಲಿ ಒಬ್ಬ ಕಳ್ಳನಾಗುವುದು, ಇನ್ನೊಬ್ಬ ಪೊಲೀಸ್ ಅಧಿಕಾರಿಯಾಗುವುದು ಕಥೆಯ ಸಾಮಾನ್ಯ ವಸ್ತು ಆಗಿರುತ್ತಿತ್ತು. ಅದೇ ತಂತ್ರವನ್ನು ಕಲರ್ಸ್ ಕನ್ನಡದ 'ರಾಮಾಚಾರಿ' ಧಾರಾವಾಹಿಯಲ್ಲಿ ಬಳಸಿಕೊಂಡಂತೆ ಕಾಣಿಸುತ್ತಿದೆ. ರಾಮಾಚಾರಿ ಹಾಗೂ ಕಿಲ್ಲರ್ ಕಿಟ್ಟಿ ಇಬ್ಬರೂ ಅವಳಿಗಳು ಎಂಬ ಎಳೆ ನಿಧಾನವಾಗಿ ಬಿಚ್ಚಿಕೊಳ್ಳತೊಡಗಿದೆ. ಕಿಲ್ಲರ್ ಕಿಟ್ಟಿ ನಾರಾಯಣಾಚಾರಿಯ ಕಾಲು ಮುಟ್ಟಿದಾಗ ಅವರಿಗೆ ಆಗುವ ಆನಂದ, ಜಾನಕಮ್ಮ ಮಗನ ನೆನಪು ಮಾಡಿಕೊಂಡು ಅಳುವುದು ಈ ಎಲ್ಲಾ ಘಟನೆಗಳು ಕಿಲ್ಲರ್ ಕಿಟ್ಟಿ ಮತ್ತು ರಾಮಾಚಾರಿ ಇಬ್ಬರೂ ಸಹೋದರರು ಎಂಬ ಸೂಚನೆ ನೀಡುತ್ತಿದೆ. ಇದರಿಂದ ಕಥೆಯನ್ನು ಇನ್ನಾರು ತಿಂಗಳು ಎಳೆಯುವುದಕ್ಕೆ ರಂಗಸಜ್ಜಿಕೆ ಸಿದ್ಧವಾಗಿದೆ. ಯಾವ ಪ್ರಕರಣಕ್ಕೆ ರಾಮಾಚಾರಿಗೆ ಜೈಲು ಶಿಕ್ಷೆ ಎನ್ನುವ ಸ್ಪಷ್ಟತೆ ಇಲ್ಲದೆ ಇರುವುದು ಕಾನೂನಿನ ಲೋಪ ಅಲ್ಲವೇ?

—ಮುರಲೀಧರ ಕುಲಕರ್ಣಿ, ಬೀದರ್

## ಬಳೆಗಾರ ಚೆನ್ನಯ್ಯ ಕಿರುತೆರೆಗೆ ಬಂದಿಹನು...

ಝೀ ಕನ್ನಡದ 'ಸರಿಗಮಪ' ರಿಯಾಲಿಟಿ ಶೋದಲ್ಲಿ ಈ ವರ್ಷದ ಆರಂಭದ ಸಂಚಿಕೆಗಳು ಭಾವುಕ ಸನ್ನಿವೇಶಗಳಿಗೆ ಸಾಕ್ಷಿಯಾದವು. ಕಲಾವಿದೆ ಸುಧಾರಾಣಿ ಅವರನ್ನು ಗೌರವಿಸುತ್ತ ಬಳೆಗಾರರನ್ನು ವೇದಿಕೆಗೆ ಬರಮಾಡಿಕೊಂಡು ಮಹಿಳೆಯರಿಗೆ ಬಳೆ ತೊಡಿಸುವ ಸಂದರ್ಭ ನಮ್ಮ ಶಾಸ್ತ್ರವನ್ನು ನೆನಪಿಸಿತು. ಇದೇ ವಾಹಿನಿಯ 'ಭೂಮಿಗೆ ಬಂದ ಭಗವಂತ'ದಲ್ಲಿ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತಿರುವುದು ಸೊಗಸಾಗಿದೆ.

—ಓಂಕಾರ್ ಗುರುಸಿದ್ದಪ್ಪ ಕೊಟ್ರೆ, ಬೆಂಗಳೂರು

## ಸ್ಫೂರ್ತಿದಾಯಕ ರವಿ ಮೂಡಿದ

ಝೀ ಕನ್ನಡದ 'ಸರಿಗಮಪ' ಸಂಚಿಕೆಯಲ್ಲಿ ಸಂಗೀತ ನಿರ್ದೇಶಕ ರವಿ ಬಸ್ರೂರ್ ಅವರ ಮಾತು ಮನಮುಟ್ಟುವಂತಿತ್ತು. ಎರಡು ಬಾರಿ ಆತ್ಮಹತ್ಯೆಗೆ ಯೋಚಿಸಿದ್ದವರ ಇಂದಿನ ಸಾಧನೆ ಮೆಚ್ಚುವಂತಹದ್ದು. ಹಿರಿಯರ ನೆರವಿನಿಂದ ಖರೀದಿಸಿದ ಕೀಬೋರ್ಡ್ ಅವರ ಜೀವನವನ್ನೇ ಬದಲಾಯಿಸಿತು. ಅದಕ್ಕಾಗಿ ತಮ್ಮ ಮೂಲ ಹೆಸರಾದ ಪ್ರವೀಣ್ ಎಂಬುದನ್ನು ಬದಲಿಸಿ ಕೀಬೋರ್ಡ್‌ಗೆ ಧನ ದಾನ ಮಾಡಿದ ರವಿ ಹೆಸರನ್ನೇ ಉಳಿಸಿಕೊಂಡಿದ್ದು ಅದ್ಭುತ. ತಮ್ಮ ಸ್ಟುಡಿಯೊದಲ್ಲಿ ಸ್ಥಳೀಯರಿಗೆ ಉದ್ಯೋಗ ಕಲ್ಪಿಸುವ ಜೊತೆಗೆ ಆಸಕ್ತರ ಕಲಾ ಸಾಧನೆಗೆ ನೆರವು ನೀಡುತ್ತಿದ್ದಾರೆ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ನುಂಗಲಾಗದ ಬಿಸಿಬಿಸಿ ಬಾತ್

ಟಿವಿ 9 ಕನ್ನಡ ವಾಹಿನಿಯ 'ಬಿಸಿ ಬಿಸಿ ಬಾತ್'ನಲ್ಲಿ ಅಲ್ಲಲ್ಲಿ ಜರುಗಿದ ವಿಶೇಷ ಘಟನೆಗಳನ್ನು ಸಂಪಾದಿಸಿ ಪ್ರಸಾರ ಮಾಡಲಾಗುತ್ತದೆ. ಈಚೆಗೆ ಎರಡು ಹೃದಯ ವಿದ್ರಾವಕ ಘಟನೆಗಳನ್ನು ಕಂಡು ತುಂಬ ದುಃಖವಾಯಿತು. ಒಂದು ತಾಯಿಯೇ ಹೆತ್ತ ಮಗನನ್ನು ಕೊಂದ ಹೇಯ ಕೃತ್ಯ. ಮತ್ತೊಂದು, ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯಲ್ಲಿ ಜಗಳದಲ್ಲಿದ್ದ ಮಗನನ್ನು ಬಿಡಿಸಲು ಮುಂದಾದ ತಾಯಿಯನ್ನೇ ಕುಡಿದ ಮತ್ತಿನಲ್ಲಿದ್ದ ವ್ಯಕ್ತಿ ಕತ್ತು ಹಿಸುಕಿ ಕೊಂದಿದ್ದು. ಒಂದೇ ದಿನ ಮನ ಕಲುಕುವ ಎರಡು ಘಟನೆಗಳನ್ನು ನೋಡಿ ಬೇಸರವಾಯಿತು.

—ರಘುನಾಥರಾವ್ ತಾಪ್ಸೆ, ದಾವಣಗೆರೆ

ವಾರದ ಪತ್ರ

## ಹೊತ್ತಲ್ಲದ ಹೊತ್ತು: ಬೇಕು ಔಚಿತ್ಯಪ್ರಜ್ಞೆ

ನಮ್ಮ ಕನ್ನಡ ಟೀವಿ ವಾಹಿನಿಗಳು ಕಾರ್ಯಕ್ರಮವನ್ನು ಪ್ರಸಾರ ಮಾಡುವ ವೇಳೆಯನ್ನು ವೀಕ್ಷಕರ ಅನುಕೂಲಕ್ಕೆ ಹೊಂದಿಸುವುದಿಲ್ಲ ಎಂದೆನಿಸಿತು. ಉದಾಹರಣೆಗೆ, ವೀಕೆಂಡ್ ದಿನಗಳಲ್ಲಿ ಸಂಜೆ 6ರಿಂದ 7.30ರವರೆಗೆ ಪ್ರಸಾರವಾಗುವ 'ಜೋಡಿ ನಂ. 1' ನೋಡಬೇಕಾದ ಜೋಡಿಗಳು ಆ ವೇಳೆ ಮನೆಯಿಂದ ಹೊರಗೆ ಹೋಗಿರುವ ಸಾಧ್ಯತೆ ಹೆಚ್ಚಿರುತ್ತದೆ. ರಾತ್ರಿ 9ಕ್ಕೆ ಮಕ್ಕಳಿಗೆಂದು 'ಡ್ರಾಮಾ ಜ್ಯೂನಿಯರ್ಸ್' ಪ್ರಸಾರ ಮಾಡುತ್ತಾರೆ. ಆಗ ಬಹುತೇಕ ಮಕ್ಕಳು ನಿದ್ರಾವಶರಾಗಿರುತ್ತಾರೆ. ಮಕ್ಕಳು ನೋಡಲು ಕುಳಿತರೆ ಮರುದಿನ ಬೆಳಗ್ಗೆ ಶಾಲೆಗೆ ಹೋಗಲು ತೊಂದರೆ ಆಗುತ್ತದೆ.

'ಭೂಮಿಗೆ ಬಂದ ಭಗವಂತ'ದ್ದೂ ಇದೇ ಕಥೆ. ದಿನಕ್ಕೊಂದು ನೀತಿ ಬೋಧಿಸುವ ಈ ಧಾರಾವಾಹಿ ಮಕ್ಕಳಿಗೂ ಉತ್ತಮವಾಗಿದೆ. ಸರಿಯಾಗಿ ಊಟದ ತುತ್ತನ್ನು ಬಾಯಿಗಿಡುವ ವೇಳೆ ಪ್ರಸಾರವಾಗುವ ಜಾಹೀರಾತಿನಲ್ಲಿ ವಾಶ್ ರೂಮಿನ ಕಮೋಡ್ ತೊಳೆಯುವ ದೃಶ್ಯ ಬರುತ್ತದೆ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಕಾನೂನು ಪಾಲನೆಯಲ್ಲಿ ತಪ್ಪಿತು ಗಟ್ಟಿಮೇಳ

ಝೀ ಕನ್ನಡದ 'ಗಟ್ಟಿಮೇಳ' ಆರಂಭದಲ್ಲಿ ತುಂಬಾ ಆಸಕ್ತಿ ಮೂಡಿಸಿತ್ತು. ಕೊನೆ ಕೊನೆಗೆ ನೀರಸವಾಗಿ ಸಾಗಿ ಕೊನೆಗೊಂಡಿತು. ಅದರಲ್ಲಿ ಖಳನಾಯಕಿ ಸುಹಾಸಿನಿಯ ಮನ ಪರಿವರ್ತಿಸಿ ಆಕೆಯನ್ನೂ ಕುಟುಂಬದ ಓರ್ವ ಸದಸ್ಯೆಯಾಗಿ ಸ್ವೀಕರಿಸಿದ ನಾಯಕ ವೇದಾಂತನ ಆದರ್ಶ ಮೆಚ್ಚತಕ್ಕದ್ದು. ಆದರೆ ಕೊಲೆ ಪ್ರಯತ್ನಗಳಲ್ಲಿ ಭಾಗಿಯಾದ ಆಕೆಯನ್ನು ಕಾನೂನು ಪ್ರಕಾರ ಶಿಕ್ಷೆಗೊಳಪಡಿಸದೆ ಬಿಟ್ಟದ್ದು ಸಾಮಾಜಿಕ ದೃಷ್ಟಿಯಲ್ಲಿ ಸಮಂಜಸವೆನಿಸಲಿಲ್ಲ!

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಗಟ್ಟಿಮೇಳ ಕೊನೆಗೂ ಮೊಳಗಲಿಲ್ಲ

ಅಂತೂ 'ಗಟ್ಟಿಮೇಳ' ಅಂತ್ಯ ಕಂಡಿತು. ಗಟ್ಟಿಕಥೆ ಇಲ್ಲದಿದ್ದರೂ ದೀರ್ಘ ಕಾಲ ಬಾಳಿತು. ನಾಲ್ಕು ವರ್ಷಗಳ ಮೇಳದ ಕಥೆಯಲ್ಲಿ ಸಮಾಜಮುಖಿ ಸಂದೇಶ ಎನ್ನುವುದು ಇರಲಿಲ್ಲ. ಗಟ್ಟಿಮೇಳ ಎಂಬ ಶೀರ್ಷಿಕೆಗೆ ತಕ್ಕಂತೆ, ಹೆಸರಿಗೆ ತಕ್ಕಂತೆ ವಾದ್ಯವನ್ನು ಬಳಸಿಕೊಳ್ಳುವಂತೆ ಕಥಾಹಂದರವನ್ನು ವಿಸ್ತಾರ ಮಾಡಬಹುದಿತ್ತು. ಆಗ ನೋಡುವ ಜೊತೆಗೆ, ಕೇಳುವ ಕುತೂಹಲವೂ ಹೆಚ್ಚುತ್ತಿತ್ತು. ಕೊನೆಯ ತನಕ ಸಂಗೀತ ಕೇಳಿಸಲೇ ಇಲ್ಲ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## 'ಚಂದನ'ದ ಕಂಪು ಹೆಚ್ಚಿಸಿದ 'ಲಂಕಾದಹನ'

ಚಂದನವಾಹಿನಿಯಲ್ಲಿ ಪ್ರಸಾರ ಮಾಡಿದ ಸೂತ್ರದ ಗೊಂಬೆ ಯಕ್ಷಗಾನ 'ಲಂಕಾದಹನ' ಅಮೋಘವಾಗಿತ್ತು. ಈ ತಂಡದ ಎಲ್ಲ ಕಲಾವಿದರಿಗೂ, ಹಾಡುಗಾರರಿಗೂ, ವಾದ್ಯ ವೃಂದದವರಿಗೂ ಧನ್ಯವಾದಗಳು. ಪ್ರತಿ ದೃಶ್ಯವೂ ತುಂಬ ಚೆನ್ನಾಗಿತ್ತು.

—ಕಮಲಾದೇವಿ ರಾಜಶೇಖರ ಹಳ್ಳೂರ್

## ಅಮೋಘ ರಾಗಸುಧೆ

ಝೀ ಕನ್ನಡದ 'ಸರಿಗಮಪ–20'ನಲ್ಲಿ ಡೆಡಿಕೇಷನ್ ಸುತ್ತು ಅವಿಸ್ಮರಣೀಯವಾಗಿತ್ತು. ವೈವಿಧ್ಯ ಹಾಡುಗಳನ್ನು ಸ್ಪರ್ಧಿಗಳು ಹೇಳಿದ್ದರಿಂದ ಆಕರ್ಷಣೀಯವಾಗಿತ್ತು. ಶ್ರಾವ್ಯ ಅವರು ತುಮಕೂರಿನ ಸಿದ್ಧಗಂಗಾ ಸ್ವಾಮೀಜಿಗಳಿಗೆ ತಮ್ಮ ಹಾಡನ್ನು ಸಮರ್ಪಿಸಿದರು. ಅಮೂಲ್ಯ ಅವರು 'ಅರಳುವ ಹೂವುಗಳೇ...' ಹಾಡನ್ನು ತುಂಬ ಸೊಗಸಾಗಿ ಪ್ರೆಸೆಂಟ್ ಮಾಡಿದರು. ತಮ್ಮ ವಿದ್ಯಾರ್ಥಿಗಳಿಗೆ ಅದನ್ನು ಅರ್ಪಿಸಿದರು. ಬಹುತೇಕ ಎಲ್ಲ ಸ್ಪರ್ಧಿಗಳು ವೀಕ್ಷಕರು ಕದಲದಂತೆ ಕುಳಿತು ಟೀವಿಯನ್ನು ನೋಡುವಂತೆ ಮಾಡಿದರು ಎಂದು ಅನ್ನಿಸುತ್ತದೆ.

—ಕೆ.ಎಸ್. ಪ್ರಭಾಕರ ಗುಪ್ತ